ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ, ಯೋಜನಾ ಮತ್ತು ನೀರಾವರಿ ಸಚಿವರು).—

ಅ) ಕೃಷ್ಣಾ ಮೇಲ್ದಂಡೆ ಯೋಜನೆಯ ವಿಶೇಷ ಜಿಲ್ಲಾಧಿಕಾರಿಗೆ ಸಾಕಷ್ಟು ಕಾರ್ಯಭಾರ ವಿರುತ್ತದೆ.

ಆ) ಇನ್ನೊಂದು ವಿಶೇಷ ಜಿಲ್ಲಾಧಿಕಾರಿಯ ಹುದ್ದೆಯನ್ನು ಸೃಷ್ಟಿಸಲು ಪ್ರಸ್ತಾವನೆಯು ಸರ್ಕಾರಕ್ಕೆ ಬಂದಿರುತ್ತದೆ.

ಇ) ಈಗಿರುವ ಕಾರ್ಯಭಾರದ ಜೊತೆಗೆ ವಿಶ್ವ ಬ್ಯಾಂಕ್‌ನವರು ಶಿಫಾರಸು ಮಾಡಿರುವ ಪುನರ್ವಸತಿ ಕಾರ್ಯಕ್ರಮವನ್ನು ಕಾರ್ಯಗತಗೊಳಿಸಲು ವಿಶೇಷ ಜಿಲ್ಲಾಧಿಕಾರಿಯು ಇನ್ನೊಂದು ಹುದ್ದೆಯ ಅಗತ್ಯವಿದೆ.

ಈ) ಇಲ್ಲ.

ಗುಲ್ಬರ್ಗ ಜಿಲ್ಲೆಯಲ್ಲಿ ಇಲಿಗಳ ಬಾಧೆಯಿಂದ ಜೋಳ ನಷ್ಟವಾದ ಬಗ್ಗೆ

೧೩೫೪(೧೭೮೬) ಶ್ರೀ ಶಿವಶೆಟ್ಟಿರಗೌಡ ಶಿರಿವಾಳ (ಶಹಾಪುರ).—ಮಾನ್ಯ ಕೃಷಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಗುಲ್ಬರ್ಗಾ ಜಿಲ್ಲೆಯಲ್ಲಿ ಈ ವರ್ಷ ಮುಂಗಾರಿ ಬೆಳೆಗೆ ಇಲಿಗಳ ಹಾವಳಿಯಿಂದ ಜೋಳ ನಷ್ಟವಾದದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಮುಂದೆಯೂ ಸಹ ಇದೇ ರೀತಿ ಮುಂಗಾರಿ ವಿತ್ತನೆ ಬೆಳೆಗೆ ಇಲಿಗಳ ಹಾವಳಿಯಾಗುವ ಸಂಭವವಿರುವುದರಿಂದ ಇದನ್ನು ತಡೆಗಟ್ಟಲು ಸರ್ಕಾರದವರು ಕೈಗೊಂಡಿರುವ ಕ್ರಮವೇನು?

ಶ್ರೀ ಆರ್. ವಿ. ದೇಶಪಾಂಡೆ (ಕೃಷಿ ಸಚಿವರು).—

ಅ) ಬಂದಿದೆ.

ಆ) ಇಲಿಗಳ ಹಾವಳಿಯನ್ನು ತಡೆಗಟ್ಟಲು ಈ ಕೆಳಕಂಡ ನಿಯಂತ್ರಣ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

೧) ಇಲಾಖೆಯು ವಿಸ್ತರಣಾ ಕಾರ್ಯಕರ್ತರ ಮೂಲಕ ಸಕಾಲದಲ್ಲಿ ರೈತರಿಗೆ ವಿವಿಧ ಸಮೂಹ ಮಾಧ್ಯಮಗಳಾದ ಆಕಾಶವಾಣಿ ಕರ ಪತ್ರಗಳನ್ನು ಹಂಚುವುದು. ರಾತ್ರಿ ಸಭೆಗಳನ್ನು ನಡೆಸುವುದು ಮುಂತಾದುವುಗಳ ಮೂಲಕ ಇಲಿ ನಿಯಂತ್ರಣದ ವಿವಿಧ ವಿಧಾನಗಳನ್ನು ಮತ್ತು ಇಲಿ ಪಾಷಾಣಗಳ ಬಳಕೆ ಬಗ್ಗೆ ತಿಳುವಳಿಕೆ ಹಾಗೂ ತರಬೇತಿ ಕೊಡುವುದು.

೨) ಇಲಿ ನಿಯಂತ್ರಣಕ್ಕೆ ಬೇಕಾದ ಇಲಿ ಪಾಷಾಣಗಳನ್ನು ಜಿಲ್ಲೆಯ ವಿವಿಧ ಮಾರಾಟ ಕೇಂದ್ರಗಳಲ್ಲಿ ದಾಸ್ತಾನು ಮಾಡಿ ರೈತರಿಗೆ ಸರಬರಾಜು ಮಾಡುವುದು.

೩) ಜಿಲ್ಲಾ ಮಟ್ಟದಲ್ಲಿ ರಚಿಸಲಾಗಿರುವ ಸಸ್ಯ ಸಂರಕ್ಷಣಾ ದಳದ ಮೂಲಕವೂ ಇಲಿ ನಿಯಂತ್ರಣ ಕಾರ್ಯಕ್ರಮಗಳನ್ನು ಕೈಗೊಳ್ಳುವುದು.

೪) ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳು ಸಹ ಇಲಿ ನಿಯಂತ್ರಣಾ ಕಾರ್ಯಕ್ರಮವನ್ನು ಆದ್ಯತೆ ಮೇರೆಗೆ ಸಾಮೂಹಿಕವಾಗಿ ಕೈಗೊಳ್ಳುವಂತೆ ವ್ಯವಸ್ಥೆ ಮಾಡಲಾಗುವುದು.

ವಾಚನಾಲಯವನ್ನು ತೆರೆಯುವ ಬಗ್ಗೆ

೧೩೫೫(೨೦೨೧) ಶ್ರೀ ವಸಂತ ವಿ. ಸಾಲ್ಯಾನ್ (ಕಾಪು).—ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರತಿ ಮಂಡಲಕ್ಕೆ ಒಂದು ವಾಚನಾಲಯವನ್ನು ತೆರೆಯುವ ಕಾರ್ಯಕ್ರಮವನ್ನು ಸರ್ಕಾರವು ಹಾಕಿಕೊಂಡಿದೆಯೇ?

ಅ) ಹಾಗಿದ್ದಲ್ಲಿ ಇದನ್ನು ಯಾವಾಗ ಕಾರ್ಯಗತ ಮಾಡಲಾಗುವುದು?

ಶ್ರೀ ಜೀವರಾಜ ಆಳ್ವ (ಉನ್ನತ ಶಿಕ್ಷಣ ಮಂತ್ರಿಗಳು).—

ಅ) ಹೌದು.

ಆ) ೧೯೮೭-೮೮ ರಿಂದ ಹಂತ ಹಂತವಾಗಿ ೭ ವರ್ಷದ ಅವಧಿಯೊಳಗೆ ಪೂರೈಸಲಾಗುವುದು.

ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ನಾಲ್ಕು ಕೆರೆಗಳ ಮಂಜೂರಾತಿ ಬಗ್ಗೆ

೧೩೫೬(೧೭೩೮) ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನಹಳ್ಳಿ).—ಮಾನ್ಯ ನಗರಾಭಿವೃದ್ಧಿ ಜಲಾಗೂ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ೧೯೮೫-೮೬ನೇ ಸಾಲಿನ ಆಯವ್ಯಯದಲ್ಲಿ ಚಿಕ್ಕನಾಯಕನಹಳ್ಳಿ ತಾಲ್ಲೂಕಿಗೆ ೪ ಕೆರೆಗಳನ್ನು ಮಂಜೂರು ಮಾಡಿರುವುದು ನಿಜವೇ?

ಆ) ಹಾಗಿದ್ದಲ್ಲಿ, ಸದರಿ ಕೆರೆಗಳ ಕಾಮಗಾರಿ ಈವರೆಗೆ ಆಗಿರುವುದೆಷ್ಟು? ಹಾಗೂ ಯಾವಾಗ ಮುಕ್ತಾಯವಾಗುತ್ತದೆ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ, ಯೋಜನೆ ಹಾಗೂ ನೀರಾವರಿ ಮಂತ್ರಿಗಳು).—

ಅ) ಹೌದು.

ಆ) ಎರಡು ಕೆರೆಗಳು ಪೂರ್ಣಗೊಂಡಿದ್ದು, ಉಳಿದ ಎರಡು ಪ್ರಗತಿಯಲ್ಲಿವೆ. ಈ ಕಾಮಗಾರಿಗಳನ್ನು ೧೯೮೭ರ ಅಂತ್ಯದೊಳಗೆ ಮುಗಿಸಲು ಯೋಜಿಸಲಾಗಿದೆ.

ಕೃಷಿ ಸಹಾಯಕರುಗಳ ಬಗ್ಗೆ

೧೩೫೭(೧೭೩೯) ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನಹಳ್ಳಿ).—ಮಾನ್ಯ ಕೃಷಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಕೃಷಿ ಸಹಾಯಕರುಗಳನ್ನು ಬಿ.ಎಸ್ಸಿ. (ಅಗ್ರಿ) ಉನ್ನತ ವ್ಯಾಸಂಗಕ್ಕಾಗಿ ಸರ್ಕಾರದವರು ಕಳುಹಿಸುತ್ತಿರುವುದು ನಿಜವೇ?

ಆ) ಹಾಗಿದ್ದಲ್ಲಿ ಇವರುಗಳಿಗೆ ಸಂಬಳವ ಜೊತೆಯಲ್ಲಿ ದಿನಭತ್ಯ ಎಷ್ಟು ಕೊಡಲಾಗುತ್ತದೆ ಹಾಗೂ ೧೯೮೬-೮೭ನೇ ಸಾಲಿನಲ್ಲಿ ಎಷ್ಟು ಜನರನ್ನು ಡೆಪ್ಯುಟೇಷನ್ ಮೇಲೆ ಕಳುಹಿಸಲಾಗಿದೆ?

ಇ) ಸದರಿ ಯೋಜನೆಯನ್ನು ಮುಂದುವರೆಸುವ ಯೋಜನೆ ಸರ್ಕಾರದವರ ಗಮನದಲ್ಲಿದೆಯೇ?

ಶ್ರೀ ಆರ್. ವಿ. ದೇಶಪಾಂಡೆ (ಕೃಷಿ ಸಚಿವರು).—

ಅ) ಹೌದು.

ಆ) ದಿನಭತ್ಯವನ್ನು ಕರ್ನಾಟಕ ಸರ್ಕಾರದ ಸೇವಾ ನಿಯಮಾವಳಿಯ ಪ್ರಕಾರ ೧೯೮೧-೮೨ನೆ ಸಾಲಿನ ತಂಡದವರೆಗೂ ಕೊಡಲಾಗುತ್ತಿತ್ತು. ೧೯೮೬-೮೭ನೇ ಸಾಲಿನಲ್ಲಿ ಬಿ.ಎಸ್ಸಿ. (ಅಗ್ರಿ)ಗೆ ಯಾರನ್ನೂ ಪ್ರತಿನಿಯೋಜಿಸಿಲ್ಲ.

ಇ) ಇಲ್ಲ.

ರಾಜ್ಯದಲ್ಲಿನ ವಾಣಿಜ್ಯ ಶಿಕ್ಷಣ ಶಾಲೆಗಳನ್ನು ರಾಷ್ಟ್ರೀಕರಣಗೊಳಿಸುವುದು

೧೩೫೮(೨೦೫೦) ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನಹಳ್ಳಿ).—ಮಾನ್ಯ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ರಾಜ್ಯದ ವಾಣಿಜ್ಯ ಶಿಕ್ಷಣ ಸಂಸ್ಥೆಗಳಲ್ಲಿ ಹೆಚ್ಚುವರಿ ಶುಲ್ಕವನ್ನು ವಸೂಲು ಮಾಡುವ ಮೂಲಕ ವಿದ್ಯಾರ್ಥಿಗಳ ಶೋಷಣೆ ಮಾಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?